ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಸಂ.ಕಂ/ಪಹಣಿ/ವಿವಾದ/60/2014-15/ ದಿನಾಂಕ: 26-05-2016

**ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,**

| ವಾದಿಗಳು | ಪ್ರತಿವಾದಿಗಳು / ಎದುರುದಾರರು |
|---|---|
| **ಶ್ರೀ ಅಂಗಡಿ ಮಹಾದೇವಪ್ಪ ತಂದೆ ಲೇಟ್ ಬುಡ್ಡಪ್ಪ ಪಶ್ಚಿಮಕಾಲ್ವಿ** | **ಶ್ರೀಮತಿ ಹೆಚ್.ಗಂಗಮ್ಮ ಗಂಡ ಲೇಟ್ ಮಲ್ಲಪ್ಪ ಪಶ್ಚಿಮಕಾಲ್ವಿ (ಶ್ರೀ ಹೆಚ್.ನಾಗೇಶ್, ವಕೀಲರು, ಹಡಗಲಿ)** |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಕಾಲ್ವಿ | 198ಎ/1 | 1.95 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನು ಶ್ರೀಮತಿ ಅಂಗಡಿ ಭರಮವ್ವರವರ ಹೆಸರಿಗೆ ಪಹಣಿ ಪಟ್ಟಾ ಇದ್ದು, ಸದರಿ ಪಟ್ಟಾದಾರರು ದಿನಾಂಕ 29-12-1998 ರಂದು ಮರಣ ಹೊಂದಿದ್ದು, ಅವರ ಮರಣದ ನಂತರ ನಮ್ಮ ತಂದೆಯವರ ಅಕ್ಕನಾದ ಶ್ರೀಮತಿ ಅಂಗಡಿ ಭರಮವ್ವರವರು ನಿಧನ ಹೊಂದಿರುವುದರಿಂದ ಅವರ ವಾರಸುದಾರರಾದ ನಮ್ಮ ತಂದೆ ಅಂಗಡಿ ಬುಡ್ಡಪ್ಪ ಮತ್ತು ನಮ್ಮ ತಾಯಿ ಪೋತಿಯಾಗಿರುತ್ತಾರೆ ತಿಳಿಸಿ ಪೋತಿವಾರಸ ಪ್ರಕಾರ ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡುವಂತೆ ಕೋರಿ ಅರ್ಜಿಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ಕಲಂ 128ರ ಅನ್ವಯ ಹಕ್ಕು ಬದಲಾವಣೆ ಪ್ರಕ್ರಿಯೆಗೆ ಒಳಪಡಿಸಲಾಗಿ, ನಿಗಧಿತ ಅವಧಿಯೊಳಗೆ ಗ್ರಾಮದಲ್ಲಿ ಗ್ರಾವ ಲೆಕ್ಕಾಧಿಕಾರಿಗಳು ಕಾಲ್ವಿ ರವರು ನಮೂನೆ-21ನ್ನು ಜಾರಿಮಾಡಿದಾಗ, ದಿನಾಂಕ 09-02-2015ರಂದು ಪ್ರತಿವಾದಿಗಳಿಂದ ಲಿಖಿತ ಆಕ್ಷೇಪಣೆ ಸ್ವೀಕೃತವಾಗಿರುವುದರಿಂದ ಕಂದಾಯ ಪರಿವೀಕ್ಷಕರು ಹಡಗಲಿರವರು ಎಂ.ಆರ್.ನಂ: ಹೆಚ್39/2014-15 ದಿನಾಂಕ 05-02-2015 ರಂದು ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ವಿಚಾರಣೆಗಾಗಿ ಈ ಕಾರ್ಯಾಲಯಕ್ಕೆ ಪ್ರಕರಣವನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಕೇಳಿಕೊಳ್ಳಲು ಅವಕಾಶ ನೀಡಿ, ದಿನಾಂಕ 16-04-2015 ರಿಂದ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಪ್ರತಿವಾದಿಗಳ ಪರ ನ್ಯಾಯವಾದಿಗಳು ಅರ್ಜಿದಾರರು ಪೋತಿವಾರಸು ಪ್ರಕಾರ ಕೋರಿದ ಅರ್ಜಿಯು ಕಾನೂನು ಬಾಹಿರವಾಗಿರುತ್ತದೆ. ಈ ಪ್ರಕರಣದಲ್ಲಿ ವಾಸ್ತವಾಂಶವನ್ನು ಮುಚ್ಚಿಟ್ಟು, ಸುಳ್ಳು ವಂಶವೃಕ್ಷವನ್ನು ಸೃಷ್ಟಿಮಾಡಿ, ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ. ಕಾಲ್ವಿ ಗ್ರಾಮಕ್ಕೆ ಸೇರಿದ ಸ.ನ. 198ಎ/1 ಪೈಕಿ ವಿಸ್ತೀರ್ಣ 2.00 ಎಕರೆ ಮೂಲತಃ ಅಂಗಡಿ ಭರಮವ್ವನವರ ಸ್ವಯಾರ್ಜಿತ ಆಸ್ತಿಯಾಗಿರುತ್ತದೆ. ಸದರಿ ಪಟ್ಟಾದಾರರು ಯಾರಿಗೂ, ಯಾವುದೇ ರೀತಿ ವಿಲ್ಲನ್ನು ಬರೆದುಕೊಟ್ಟಿರುವುದಿಲ್ಲ. ಸದರಿಯವರು 1998ನೇ ಇಸ್ವಿಯಲ್ಲಿ ಮರಣ ಹೊಂದಿದ್ದು, ಈ ಪ್ರಶ್ನಿತ ಜಮೀನು ವಾದಿಗಳ ಅನುಭವದಲ್ಲಿ ಇರುತ್ತದೆ. ಶ್ರೀಮತಿ ಮಹಾದೇವಪ್ಪ ದಿನಾಂಕ 18-02-2015 ರಂದು ಮರಣ ಹೊಂದಿರುವುದರಿಂದ ಸದರಿ ಅರ್ಜಿಯನ್ನು ಮುಕ್ತಾಯಗೊಳಿಸಬೇಕೆಂದು ಮತ್ತು ಆತನು ವಾರಸುದಾರನಲ್ಲವೆಂದು ತಿಳಿಸಿ, ಈ ವಿವಾದಿತ ಜಮೀನಿಗೆ ಸಂಬಂಧಿಸಿದಂತೆ ದಾವಾ ಸಂಖ್ಯೆ 05/2015ರಲ್ಲಿ ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲಯ ಹಡಗಲಿಯಲ್ಲಿ ವಿಚಾರಣೆಯ ಹಂತದಲ್ಲಿ ಇದ್ದು, ಅಲ್ಲಿಯ ಆದೇಶ ಆಗುವವರೆಗೂ ಯಾರಿಗೂ ಯಾವುದೇ ರೀತಿಯ ಹಕ್ಕು ಬದಲಾವಣೆ ಮಾಡಬಾರದು ಎಂದು ತಿಳಿಸಿ, ಅರ್ಜಿದಾರರ ಮನವಿಯನ್ನು ತಿರಸ್ಕರಿಸಲು ಕೋರಿ, ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

ವಾದಿಗಳು ದಿನಾಂಕ 18-02-2015ರಂದು ನಿಧನ ಹೊಂದಿರುವುದರಿಂದ ಹಾಗೂ ಈ ಜಮೀನಿಗೆ ಸಂಬಂಧಪಟ್ಟಂತೆ ಮಾನ್ಯ ಜೆ.ಎಂ.ಎಫ್.ಸಿ. ಸಿವಿಲ್ ನ್ಯಾಯಾಲಯದಲ್ಲಿ ಓಎಸ್ ನಂ: 05/2015ರಂತೆ ವಿಚಾರಣೆ ನಡೆಯುತ್ತಿರುವುದು ಈ ನ್ಯಾಯಾಲಯದ ಗಮನಕ್ಕೆ ತಿಳಿದು ಬಂದಿರುತ್ತದೆ.

26/5

ಈ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಗಳ ಹಾಗೂ ಅವರಪರ ನ್ಯಾಯವಾದಿಗಳ ವಾದವನ್ನು ಆಲಿಸಲಾಯಿತು. ಈ ಪ್ರಕರಣವು ಸಿವಿಲ್ ಸ್ವರೂಪದ್ದಾಗಿರುವುದರಿಂದ ಮಾನ್ಯ ಸಿವಿಲ್ ನ್ಯಾಯಾಲಯದ ಆದೇಶಕ್ಕೆ ಒಳಪಟ್ಟು, ಈ ವಾದಿಗಳ ಮನವಿಯನ್ನು ತಿರಸ್ಕರಿಸಿ ಈ ಕೆಳಕಂಡ ಆದೇಶ.

## ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿದ ಹಿನ್ನೆಲೆ, ಸಂದರ್ಭ, ಕಾರಣಗಳಿಂದಾಗಿ ವಾದಿಗಳು ಮರಣ ಹೊಂದಿರುವುದರಿಂದ ಹಾಗೂ ಈ ಪ್ರಕರಣವು ಸಿವಿಲ್ ಸ್ವರೂಪದಾಗಿರುವುದರಿಂದ ಈ ಜಮೀನಿಗೆ ಸಂಬಂಧಪಟ್ಟಂತೆ ಓ.ಎಸ್.ನಂ 05/2015ರಂತೆ ಮಾನ್ಯ ಜೆ.ಎಂ.ಎಫ್. ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದ್ದು ಅವರ ಆದೇಶಕ್ಕೆ ಒಳಪಟ್ಟು ವಾದಿಗಳ ಮನವಿಯನ್ನು ತಿರಸ್ಕರಿಸಿ, ಪಹಣಿಯಲ್ಲಿ ಯಥಾಸ್ಥಿತಿ ಕಾಪಾಡಲು ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

26/5/16

ತಹಶೀಲ್ದಾರರು
ಹಡಗಲಿ.

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.

2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.